## ಕಾಯಕಜೀವಿ



ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಪುಟ್ಟ ಹಳ್ಳಿ ಬಿದರಹಳ್ಳಿ. ಅಲ್ಲಿ ಕಸ್ತೂರವ್ವ ವೀ. ಮತ್ತೂರು ಇವರು ತಮ್ಮ ಹೊಲಿಗೆಯ ಕಾಯಕದಿಂದ ಚೆಂದದ ಬದುಕನ್ನು ಕಟ್ಟಿಕೊಂಡವರು. ದೇಹಿ ಅಂತ ಬಂದವರನ್ನು ಎಂದೂ ಅವರನ್ನು ಬರಿಗೈಲಿ ಕಳಿಸಿದವರಲ್ಲ.

ಕೊರೊನಾ ವೈರಸ್ ಸೋಂಕು ಹರಡದಂತೆ ಇಡೀ ದೇಶವೇ ಲಾಕ್ ಡೌನ್ ಒಳಗಾಗಿತ್ತು. ಇಂತಹ ಸ್ಥಿತಿಯಲ್ಲಿ ಬಡವರ ಬದುಕು ಬೀದಿಗೆ ಬಿದ್ದಿದೆ. ಇದನ್ನು ಅರಿತು ಇವರು ಮನೆಯಲ್ಲಿ ಬಡವರಿಗೆ ಸಾವಿರಾರು ಮಾಸ್ಕ್ ಹೊಲಿದು ಅವರಿಗೆ ಆಸರೆಯಾಗಿದ್ದಾರೆ. ನಿಜವಾಗಿಯೂ ಇವರು ಸೇವೆ ಅನನ್ಯ. ಉಳಿದವರಿಗೆ ಅನುಕರಣೀಯ.

—ಚಂದ್ರಕಾಂತ ಮ. ತಾಳಿಕೋಟಿ



## ಮೂಷಿಕನಲ್ಲಿ ಅರಿಕೆ!

ಸಾಮಾನ್ಯವಾಗಿ ಗಣಪತಿ ದೇವಸ್ಥಾನಗಳಿರುವಲ್ಲಿ ಮೂಷಿಕನಿಗೆ ಸ್ಥಾನ ಇದ್ದೇ ಇದೆ. ಹೇಗಿದ್ದರೂ ಗಣಪನ ವಾಹನ ಮೂಷಿಕ. ಬಹುತೇಕ ಕಡೆ ಗಣಪತಿ ಮೂರ್ತಿಯ ಬಳಿಯೇ ಮೂಷಿಕ ಇರುವುದನ್ನು ನೋಡಬಹುದು.

ಆದರೆ ಮಹಾರಾಷ್ಟ್ರದ ಪುಣೆಯ ಪೇಟ್‌ದಲ್ಲಿರುವ ಪ್ರಸಿದ್ಧ ಗಣಪತಿ ದೇವಸ್ಥಾನದಲ್ಲಿ ಮೂಷಿಕನಿಗೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿದೆ. ಬಂಗಾರದ ಆಭರಣಗಳಿಂದ ಗಣಪತಿ ಅಲಂಕೃತಗೊಂಡಿದ್ದರೆ, ಅವನ ಎದುರು ದೊಡ್ಡ ಮೂಷಿಕ ಪ್ರತಿಮೆ ಬೆಳ್ಳಿಯ ಅಲಂಕಾರದಲ್ಲಿದೆ. ಒಳಗೆ ಗಣಪತಿ ದರ್ಶನಕ್ಕೆ ಸಾಲಾಗಿ ಹೋಗುವ ಮೊದಲು ಮೂಷಿಕನ ಕಿವಿಯಲ್ಲಿ ನಮ್ಮ ಇಷ್ಟಾರ್ಥ ಹೇಳಿಕೊಳ್ಳಬೇಕು. ಹಾಗೆ ಹೇಳಿಕೊಂಡರೆ ಅದು ಈಡೇರುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ.

—ಗಣಪತಿ ಶಿರಳಗಿ, ಸಾಗರ

## ಕಲಾತ್ಮಕ ತೊಟ್ಟಿ

ದಕ್ಷಿಣಕನ್ನಡ ಜಿಲ್ಲೆಯ ಸುರತ್ಕಲ್ ಬೀಚ್ ಸಮೀಪದ ಪುಟ್ಟ ಬೆಟ್ಟದಲ್ಲಿರುವ ಸದಾಶಿವ ಗಣೇಶ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಪ್ರವೇಶ ದ್ವಾರದ ಪಕ್ಕದಲ್ಲಿ ನಿಲ್ಲಿಸಿರುವ ಆಳೆತ್ತರದ ಪೆಂಗ್ವಿನ್ ಗೊಂಬೆಗಳನ್ನು ಕಂಡು ಅಚ್ಚರಿಯಾಯಿತು.

ಮಕ್ಕಳ ಮನರಂಜನೆಗಾಗಿ ಇಟ್ಟಿರಬಹುದೇನೋ ಎಂದೆಣಿಸಿ ಸನಿಹ ಹೋಗಿ ನೋಡಿದಾಗ ಅದು ಕಸದ ತೊಟ್ಟಿಯೆಂಬ ವಾಸ್ತವ ಅರಿವಾಯಿತು. ದೇವಸ್ಥಾನದಲ್ಲಿ ಸ್ವಚ್ಛತೆ ಕಾಪಾಡುವ ಸಲುವಾಗಿ ಈ ಕಲಾತ್ಮಕ ಕಸದ ತೊಟ್ಟಿ ಅಳವಡಿಸಿದ್ದು ಮಕ್ಕಳೂ ಇದರಿಂದ ಆಕರ್ಷಿತರಾಗಿ ಕಸ ಕಡ್ಡಿಗಳನ್ನು ಅದರ ಎದೆಭಾಗದಲ್ಲಿರುವ ರಂಧ್ರದೊಳಗೆ ಹಾಕಿ ಆನಂದಿಸುತ್ತಾರೆ. ಮಕ್ಕಳ ಈ ವರ್ತನೆ ಹಿರಿಯರನ್ನೂ ಜಾಗೃತಗೊಳಿಸುವುದರಿಂದ ಅಲ್ಲೆಲ್ಲೂ ತ್ಯಾಜ್ಯ ಕಾಣಿಸುವುದಿಲ್ಲ. ಕಲಾತ್ಮಕವಾಗಿರುವುದರಿಂದ ಆ ತೊಟ್ಟಿಯ ಶುಚಿತ್ವಕ್ಕೂ ಮಹತ್ವ ನೀಡಲಾಗಿದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

